ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಐ. ಸಿ. ಎ. ಆರ್.- ಕೃಷಿ ವಿಜ್ಞಾನ ಕೇಂದ್ರ

ಹನುಮನಮಟ್ಟಿ - 581135 ಜಿ: ಹಾವೇರಿ

ವಾರ್ತಾ ಪತ್ರ

ಸಂಪುಟ: 14 ಸಂಚಿಕೆ: 1 ಜನವರಿ–ಮಾಚ್ 2016

## ಅರಿವು ಕಾರ್ಯಕ್ರಮ




ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ಕೃಷಿ ಇಲಾಖೆ, ಹಾವೇರಿ ಹಾಗೂ ಕೃಷಿ ಹಣಕಾಸು ನಿಗಮ ಹುಬ್ಬಳ್ಳಿ ಇವರ ಸಂಯುಕ್ತಾಶ್ರಯದಲ್ಲಿ "ಇಕ್ವಿಟಿ ಗ್ರಾಂಟ್ ಹಾಗೂ ಕ್ರೆಡಿಟ್ ಗ್ಯಾರಂಟ್ ಫಂಡ್ ಸ್ಕೀಮ್ ಇನ್ ಕರ್ನಾಟಕ ಸ್ಟೇಟ್" ಎಂಬ ವಿಷಯದ ಕುರಿತು ಒಂದು ದಿನದ ಅರಿವು ಕಾರ್ಯಕ್ರಮವನ್ನು ದಿನಾಂಕ 29.02.2016 ರಂದು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸುಮಾರು 60 ಜನ ರೈತರು ಕಾರ್ಯಕ್ರಮದ ಪ್ರಯೋಜನ ಪಡೆದರು.

## ರೈತ ಆಸಕ್ತ ಗುಂಪುಗಳಿಗಾಗಿ ಒಂದು ದಿನದ ತರಬೇತಿ ಹಾಗೂ ಬಲವರ್ಧನ ಕಾರ್ಯಕ್ರಮ



ದಿನಾಂಕ: 26.02.2016 ರಂದು ಹಿರೇಕೆರೂರು ತಾಲ್ಲೂಕಿನ ರಟ್ಟೀಹಳ್ಳಿ ಗ್ರಾಮದಲ್ಲಿ ರೈತ ಆಸಕ್ತ ಗುಂಪುಗಳಿಗಾಗಿ ಒಂದು ದಿನದ ತರಬೇತಿ ಹಾಗೂ ಬಲವರ್ಧನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಕೃಷಿ ತಾಂತ್ರಿಕ ತಜ್ಞರಾದ ಶ್ರೀ ಡಿ. ಎಸ್. ಎಂ. ಗೌಡರವರು ರೈತ ಆಸಕ್ತ ಗುಂಪುಗಳ ರಚನೆ, ಉದ್ದೇಶ ಹಾಗೂ ತೆಗೆದುಕೊಳ್ಳಬೇಕಾದ ಕಾರ್ಯಚಟುವಟಿಕೆಗಳ ಕುರಿತು ತರಬೇತಿ ನೀಡಿದರು. ಗ್ರಾಮದ ಮೂರು ಗುಂ ನ ಸುಮಾರು 50 ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅರಿವು ಕಾರ್ಯಕ್ರಮ



ಶಿಗ್ಗಾಂವಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಕೇಂದ್ರದ ವತಿಯಿಂದ ದಿನಾಂಕ 02.03.2016 ರಂದು ಕಿರುಧಾನ್ಯಗಳ ಉತ್ಪಾದನೆ ಹಾಗೂ ಮೌಲ್ಯವರ್ಧನೆ ಕುರಿತಂತೆ ಒಂದು ದಿನದ ಹೊರ ಆವರಣ ತರಬೇತಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯಲ್ಲಿ ಕಿರುಧಾನ್ಯಗಳ ಮಹತ್ವ, ಬೇಸಾಯ ಕ್ರಮಗಳು, ಸಸ್ಯಸಂರಕ್ಷಣೆ ಹಾಗೂ ಮೌಲ್ಯವರ್ಧನೆ ಕುರಿತಂತೆ ಅನೇಕ ಮಹತ್ವದ ಮಾಹಿತಿಗಳನ್ನು ಗ್ರಾಮಸ್ಥರಿಗೆ ನೀಡಲಾಯಿತು. ತರಬೇತಿಯ ಉಪಯೋಗವನ್ನು ಗ್ರಾಮದ 50 ಜನ ಪುರುಷರು ಮತ್ತು ಮಹಿಳೆಯರು ಪಡೆದುಕೊಂಡರು

## ಕೇಂದ್ರಕ್ಕೆ ಬಿಜಾಪುರದ ಪ್ರಗತಿ ಪರ ರೈತರ ಭೇಟಿ




ದಿನಾಂಕ 01.03.2016 ರಂದು ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಬಿಜಾಪುರದಿಂದ 10 ಪ್ರಗತಿ ಪರ ರೈತರ ತಂಡ ಕೇಂದ್ರಕ್ಕೆ ಅಲ್ಲಿನ ವಿಸ್ತರಣಾ ಮುಂದಾಳು ಶ್ರೀ ಅಸ್ಕಿಯವರ ನೇತೃತ್ವದಲ್ಲಿ ಭೇಟಿ ನೀಡಿತು. ರೈತರಿಗೆ ಕೇಂದ್ರದ ಕಾರ್ಯ ಚಟುವಟಿಕೆಗಳು, ಧ್ಯೇಯೋದ್ದೇಶಗಳು ಹಾಗು ಇತರೆ ಕಾರ್ಯಕ್ರಮಗಳ ಬಗ್ಗೆ ಶ್ರೀಮತಿ ಗೀತಾ ಇವರು ಮಾಹಿತಿ ನೀಡಿದರು. ರೈತರು ಕೇಂದ್ರದ ಆವರಣದಲ್ಲಿರುವ ಪ್ರಾತ್ಯಾಕ್ಷಿಕೆ ತಾಕುಗಳಿಗೆ ಭೇಟಿ ನೀಡಿ ಪ್ರಾಯೋಗಿಕ ಮಾಹಿತಿಗಳನ್ನು ಪಡೆದುಕೊಂಡರು.

## ಕ್ಷೇತ್ರ ಪರಿಶೀಲನೆ ಹಾಗೂ ಮುಂಚೂಣಿ ಪ್ರಾತ್ಯಕ್ಷಿಕೆಗಳ ತಾಕುಗಳಿಗೆ ವಿಜ್ಞಾನಿಗಳ ಭೇಟಿ



ಮೊಟೆಬೆನ್ನೂರ ಗ್ರಾಮದಲ್ಲಿ ಶ್ರೀ ಮಹದೇವಪ್ಪ ಇವರ ಜೋಳ–ಎಸ್. .ವ್ಹಿ–2217 ಮುಂಚೂಣಿ ಪ್ರಾತ್ಯಕ್ಷಿಕೆ ಕ್ಷೇತ್ರಕ್ಕೆ ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಜೆ ಕರಕಣ್ಣವರ ಹಾಗೂ ಡಾ. ಅರ್ಚನಾ ಭೇಟಿ ನೀಡಿ ಸೂಕ್ತ ಸಲಹೆ ನೀಡಿದರು. ಜೋಳ–ಎಸ್. .ವ್ಹಿ–2217 ಪ್ರಾತ್ಯಕ್ಷಿಕೆಗಳನ್ನು ಬ್ಯಾಡಗಿ, ಗುಮ್ಮನಹಳ್ಳಿ, ರಾಮಗೊಂಡನಹಳ್ಳಿ, ಅಳಲಗೇರಿ, ಕಜ್ಜರಿ ಗ್ರಾಮಗಳಲ್ಲಿ ಕೈಗೊಳ್ಳಲಾಗಿತ್ತು.



ಕೇಂದ್ರದ ವತಿಯಿಂದ ಹಿರೇಕೆರೂರ ತಾಲ್ಲೂಕಿನ ಮಾಸೂರು ಗ್ರಾಮದಲ್ಲಿ ಕೈಗೊಂಡ ಮೆಣಸಿನಕಾಯಿ ಬೆಳೆಯ ಮುಟುರು ರೋಗ ಸಂರಕ್ಷಣೆ ಪ್ರಾತ್ಯಕ್ಷಿಕೆಯಲ್ಲಿ ರೈತರು ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿ ಹೆಚ್ಚಿನ ಇಳುವರಿಯನ್ನು ಪಡೆದಿದ್ದಾರೆ. ಮಾಸೂರ ಗ್ರಾಮದ ಶ್ರೀ ಸುರೇಶ ನಲವಡಿಯವರ ಕ್ಷೇತ್ರದಲ್ಲಿ ಹಮ್ಮಿಕೊಂಡ ಮೆಣಸಿನ ಕಾಯಿ ಎಲೆ ಮುಟುರು ರೋಗದ ನಿರ್ವಹಣೆ ಪ್ರಾತ್ಯಕ್ಷಿಕೆ ಕ್ಷೇತ್ರಕ್ಕೆ ಡಾ. ಎಸ್. ಎ. ಅಷ್ಟಪುತ್ರೆಯವರು ಭೇಟಿ ನೀಡಿ ಮಾಹಿತಿ ನೀಡಿದರು.



**ಟೊಮ್ಯಾಟೊದ ಅರ್ಕಾ ರಕ್ಷಕ ಸಂಕರಣ ತಳಿಯ ಪ್ರಾತ್ಯಕ್ಷಿಕೆಯನ್ನು** ಇಟಗಿ, ಕಜ್ಜರಿ, ರಾಮಗೊಂಡನಹಳ್ಳಿ, ಹಾಲಗಿ, ನೆಗಳೂರು ಗ್ರಾಮಗಳಲ್ಲಿ ಕೈಗೊಳ್ಳಲಾಗಿತ್ತು. ಬೆಂಗಳೂರಿನ ಅಟಾರಿಯ ನಿರ್ದೇಶಕರಾದ ಡಾ. ಶ್ರೀನಾಥ ದೀಕ್ಷಿತ ಹಾಗೂ ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ. ಐ. ಬೆಣಗಿಯವರು ಕೇಂದ್ರದ ವಿಜ್ಞಾನಿಗಳೊಂದಿಗೆ ಪ್ರಾತ್ಯಕ್ಷಿಕ ತಾಕುಗಳಿಗೆ ಭೇಟಿ ನೀಡಿ ಮಾಹಿತಿ ನೀಡಿದರು.



**ಶೇಂಗಾ ತಳಿ ಡಿ.ಹೆಚ್.–101** ಎಂಬ ಹೊಸ ತಳಿಯ ಕ್ಷೇತ್ರ ಪರೀಕ್ಷೆಯನ್ನು ಮಾಸೂರು ಹಾಗೂ ಕಾಗಿನೆಲೆ ಗ್ರಾಮಗಳಲ್ಲಿ ಕೈಗೊಳ್ಳಲಾಗಿದ್ದು ರೈತರ ತಾಕುಗಳಿಗೆ ಕೇಂದ್ರದ ವಿಜ್ಞಾನಿಗಳಾದ ಶ್ರೀ ಡಿ.ಎಸ್.ಎಂ.ಗೌಡ ಹಾಗೂ ಡಾ. ಎಸ್. ಎ. ಅಷ್ಟಪುತ್ರೆಯವರು ಭೇಟಿ ನೀಡಿದರು.

## "ರೈತ-ವಿಜ್ಞಾನಿಗಳ ಸಂವಾದ"





ಕೇಂದ್ರದಲ್ಲಿ ದಿ: 09.03.2016ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ರೈತ–ವಿಜ್ಞಾನಿಗಳ ಸಂವಾದ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿಯ ಪ್ರಾಧ್ಯಾಪಕರಾದ ಡಾ. ಎಸ್. ಐ. ಹಾಳಿಕಟ್ಟಿಯವರು ಕೃಷಿಯಲ್ಲಿ ನೀರಿನ ನಿರ್ವಹಣೆ ಮಹತ್ವ ಕುರಿತು ಮಾತನಾಡಿದರು

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಜ್ಜರಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ನಾಗಪ್ಪ ಬಿದರಕಟ್ಟಿ ಹಾಗೂ ಕಾಕೋಳ ಗ್ರಾಮದ ಶ್ರೀ ಶಿವಕುಮಾರ ಶಿಡಗನಾಳ ಇವರುಗಳು ತಮ್ಮ ಗ್ರಾಮಗಳ ಮುಖ್ಯ ಬೆಳೆಗಳು ಹಾಗು ಅವುಗಳಲ್ಲಿ ಕಂಡು ಬರುತ್ತಿರುವ ರೋಗ ಕೀಟಬಾಧೆ ಕುರಿತು ಪ್ರಸ್ತಾ ಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣವರ ರವರು ಕೃಷಿ ವಿಜ್ಞಾನ ಕೇಂದ್ರದ ಧ್ಯೇಯೋದ್ದೇಶಗಳನ್ನು ವಿವರಿಸುತ್ತಾ ಪ್ರಸ್ತುತ ದಿನಮಾನಗಳಲ್ಲಿ ಸಾವಯವ ಕೃಷಿ, ಕಳೆ ನಿರ್ವಹಣೆಗೆ ಹೆಚ್ಚು ಕಾಳಜಿವಹಿಸಿ ಕೃಷಿಕರು ವಿಜ್ಞಾನಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಮಾರ್ಗದರ್ಶನ ಪಡೆಯಬೇಕಾಗಿ ಕೋರಿದರು.

ಕೃಷಿ ಮಹಾವಿದ್ಯಾಲಯ, ಕೃಷಿ ಸಂಶೋಧನಾ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ವಿ.ಎಸ್. ಪಾಟೀಲ್, ಡಾ. ಎಸ್.ಟಿ. ಪ್ರಭು, ಡಾ. ಜಗದೀಶ, ಶ್ರೀ ಟಿ. ಗಣಪತಿ, ಡಾ. . ಅಶೋಕ, ಡಾ. ಅರ್ಜುನ ಶರ್ಮಾ, ಶ್ರೀ ಡಿ. ಎಸ್. ಎಂ. ಗೌಡ, ಶ್ರೀಮತಿ ಗೀತಾ ಎಸ್. ಟಿ, ಡಾ. ಅರ್ಚನಾ ಬಿ. ಮತ್ತು ಡಾ. ಎಸ್. ಎ. ಅಷ್ಟಪುತ್ರೆ ಉಪಸ್ಥಿತರಿದ್ದು ರೈತರ ಜೊತೆ ಚರ್ಚೆ ನಡೆಸಿ ಅವರ ಪ್ರಶ್ನೆಗಳಿಗೆ ಸೂಕ್ತ ಮಾಹಿತಿ ನೀಡುವುದರ ಜೊತೆಗೆ ಪ್ರಸ್ತಕ ಸಾಲಿನಲ್ಲಿ ಉತ್ತಮ ಇಳುವರಿಗಾಗಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಜಿಲ್ಲೆಯ ಕಾಕೋಳ, ಕಜ್ಜರಿ, ಶೇಷಗಿರಿ, ಮಾಸುರು, ಬರಡಿ, ಬಸಾಪುರ ಗ್ರಾಮಗಳಿಂದ ಸುಮಾರು 100 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು.

## "ಶೇಂಗಾ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಮತ್ತು ಬೀಜೋತ್ಪಾದನೆ" ಕುರಿತು "ವಿಚಾರ ಸಂಕಿರಣ"





ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 10.03.2016 ರಂದು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ "ಶೇಂಗಾ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು ಮತ್ತು ಬೀಜೋತ್ಪಾದನೆ" ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಬಾಡ ಗ್ರಾಮದ ಪ್ರಗತಿಪರ ಕೃಷಿ ಮಹಿಳೆಯಾದ ಶ್ರೀಮತಿ ಲಕ್ಷ್ಮಿ ಕಮ್ಮಾರವರು ಉದ್ಘಾಟಿಸಿ ಕೇಂದ್ರದ ಚಟುವಟಿಕೆಗಳ ಪ್ರಯೋಜನವನ್ನು ಎಲ್ಲರೂ ಪಡೆಯಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾಸೂರಿನ ಪ್ರಗತಿ ಪರ ರೈತರಾದ ಶ್ರೀ ಸುರೇಶ ಡಿ. ನಲವಡಿಯವರು ತಮ್ಮ ಶೇಂಗಾ ಬೆಳೆಯ ಕೃಷಿ ಅನುಭವಗಳನ್ನು ರೈತರೊಂದಿಗೆ ಹಂಚಿಕೊಂಡರು. ಕೇಂದ್ರದ ವಿಜ್ಞಾನಿಯಾದ ಶ್ರೀ ಡಿ.ಎಸ್.ಎಂ. ಗೌಡ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಶೇಂಗಾ ಬೆಳೆಯ ಬೀಜೋತ್ಪಾದನೆ ಮಹತ್ವ ಮತ್ತು ಕೇಂದ್ರದಿಂದ ದೊರಕುವ ತಾಂತ್ರಿಕ ಮಾಹಿತಿಯ ಲಾಭ ಪಡೆದುಕೊಳ್ಳುವಂತೆ ರೈತರಿಗೆ ಕರೆ ನೀಡಿದರು.

ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಜೆ. ಕರಕಣ್ಣನವರ ಇವರು ಶೇಂಗಾ ಪೌಷ್ಠಿಕತೆ ಬಗ್ಗೆ ವಿವರಿಸಿ ಶೇಂಗಾ ಕಾಯಿ ಬಿಡಿಸುವ ಯಂತ್ರದ ಪ್ರಾತ್ಯಕ್ಷಿಕೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ. ಎಸ್.ಐ. ಹಾಳಿಕಟ್ಟಿ, (ಡೀನ್), ಡಾ. ಎಸ್.ಎ. ಅಷ್ಟಪುತ್ರೆ, ಡಾ. ಎಸ್.ಟಿ. ಪ್ರಭು, ಡಾ. ಮಹಾಂತೇಶ ನಾಯಕ, ಡಾ. ಜಗದೀಶ, ಡಾ. ಆಶೋಕ . ಮತ್ತು ಶ್ರೀಮತಿ ಗೀತಾ ಎಸ್. ತಾಮಗಳೆ ಇವರುಗಳು ಶೇಂಗಾ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು, ಬೀಜೋತ್ಪಾದನೆ ಮತ್ತು ಮೌಲ್ಯವರ್ಧನೆ ಕುರಿತು ಉಪನ್ಯಾಸ ನೀಡಿದರು.

ಜಿಲ್ಲೆಯ ವಿವಿಧ ಗ್ರಾಮಗಳಿಂದ ಸುಮಾರು 100 ರೈತ/ರೈತ ಮಹಿಳೆಯರು ಭಾಗವಹಿಸಿದ್ದರು.

## ಸಿರಿ ಧ್ಯಾನಗಳಾದ ರಾಗಿ ಮತ್ತು ನವಣೆಯಿಂದ ಶಾವಿಗೆ ತಯಾರಿಸುವ ಪ್ರಾತ್ಯಕ್ಷಿಕೆಯನ್ನು ರಾಣೆಬೆನ್ನೂರ, ತಿಮ್ಮಾಪುರ ಬ್ಯಾಡಗಿ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.






- ರಾಗಿ ಹಿಟ್ಟು ( 2 ಕಿ.ಗ್ರಾಂ.) ಹಾಗೂ ಚಿರೋಟಿ ರವೆ (2 ಕಿ.ಗ್ರಾಂ.) ಬೆರೆಸಿ ರಾಗಿ ಶಾವಿಗೆ ತಯಾರಿಸಬಹುದು.
- ನವಣೆ ಹಿಟ್ಟು (2 ಕಿ.ಗ್ರಾಂ.) ಹಾಗೂ ಚಿರೋಟಿ ರವೆ (2 ಕಿ.ಗ್ರಾಂ) ಬೆರೆಸಿ ನವಣೆ ಶಾವಿಗೆ ತಯಾರಿಸಬಹುದು

## ಕೃಷಿ ಅಭಿವೃದ್ಧಿಯಲ್ಲಿ ಸಮುದಾಯ ಬಾನುಲಿ ಕೇಂದ್ರ ಕುರಿತ ತರಬೇತಿ



ಕೇಂದ್ರದ ವಿಜ್ಞಾನಿಗಳಾದ ಡಾ. ಎಸ್. ಎ. ಅಷ್ಟಪುತ್ರೆ ಮತ್ತು ಡಾ. ಗೀತಾ ಎಸ್. ತಾಮಗಳೆ ಇವರು ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಆಯೋಜಿಸಲಾದ ಕೃಷಿ ಅಭಿವೃದ್ಧಿಯಲ್ಲಿ ಸಮುದಾಯ ಬಾನುಲಿ ಕೇಂದ್ರ ಕುರಿತ 4 ದಿನಗಳ ತರಬೇತಿ ಕಾರ್ಯಕ್ರಮ (14.03.2016 ರಿಂದ 17.03.2016)ದಲ್ಲಿ ಭಾಗವಹಿಸಿದರು.

## 2016-17 ಸಾಲಿನಲ್ಲಿ ಕೇಂದ್ರದಿಂದ ತೆಗೆದುಕೊಳ್ಳಲಾಗುವ ಕ್ಷೇತ್ರ ಪರೀಕ್ಷೆ ಹಾಗೂ ಮುಂಚೂಣಿ ಪ್ರಾತ್ಯಕ್ಷಿಕೆಗಳು

| ಕ್ರ. ಸಂ | ಬೆಳೆ/ ಉದ್ಯಮ | ಕ್ರಮಗಳು | ಒಟ್ಟು ಪ್ರಾತ್ಯಕ್ಷಿಕೆಗಳು |
|---|---|---|---|
| | | **ಕ್ಷೇತ್ರ ಪರೀಕ್ಷೆಗಳು** | |
| 1 | ಈರುಳ್ಳಿ | ನೇರಳೆ ಎಲೆಮಚ್ಚೆ ರೋಗ ಹಾಗೂ ಥ್ರಿಪ್ಸ್ ನುಸಿಯ ನಿರ್ವಹಣೆ ಕ್ಷೇತ್ರ ಪರೀಕ್ಷೆ | 05 |
| 2 | ಗೋವಿನ ಜೋಳ | ಮಣ್ಣು ಮತ್ತು ಸಿಂಪರಣೆ ಮೂಲಕ ಲಘು ಪೋಷಕಾಂಶಗಳ ಪೂರೈಕೆ | 02 |
| | | **ಮುಂಚೂಣಿ ಪ್ರಾತ್ಯಕ್ಷಿಕೆಗಳು** | |
| 1 | ಜೋಳ | ಎಸ್. .ವಿ–2217 ಜೋಳದ ತಳಿಯ ಪ್ರಾತ್ಯಕ್ಷಿಕೆ | 10 |
| 2 | ನವಣೆ | ಡಿ.ಹೆಚ್.ಎಫ್.ಟಿ–109–3 ಹೊಸ ತಳಿಯ ಪ್ರಾತ್ಯಕ್ಷಿಕೆ | 15 |
| 3 | ಸಾವೆ | ಡಿ.ಹೆಚ್.ಎಲ್.ಎಮ್–36–3 ಹೊಸ ತಳಿಯ ಪ್ರಾತ್ಯಕ್ಷಿಕೆ | 10 |
| 4 | ಶೇಂಗಾ | ಡಿ.ಹೆಚ್–101 ಶೇಂಗಾ ತಳಿಯ ಬಗ್ಗೆ ಪರಿಚಯಿಸುವುದು | 10 |
| 5 | ಹೆಸರು | ಡಿ.ಜಿ.ಜಿ.ವಿ–2 ಎಂಬ ಹೊಸ ತಳಿ ಪರಿಚಯಸುವುದು | 10 |
| 6 | ಈರುಳ್ಳಿ | ಹೆಚ್ಚಿನ ಇಳುವರಿಗಾಗಿ ಅರ್ಕಾಕಲ್ಯಾಣ ಹೊಸ ತಳಿಯ ಪ್ರಾತ್ಯಕ್ಷಿಕೆ | 15 |
| 7 | ಗೈಲ್ಲಾರ್ಡಿಯಾ | ಹೆಚ್ಚಿನ ಇಳುವರಿ ಕೊಡುವ ಡಿ.ಜಿ.ಎಸ್.–1 ತಳಿಯ ಪ್ರಾತ್ಯಕ್ಷಿಕೆ | 10 |
| 8 | ಮಾವು | ಮಾವಿನಲ್ಲಿ ಸಮಗ್ರ ಬೆಳೆ ನಿರ್ವಹಣೆ | 05 |
| 9 | ಮೆಣಸಿನ ಕಾಯಿ | ಸಮರ್ಪಕ ಮೆಣಸಿನ ಕಾಯಿಯ ಎಲೆ ಮುಟುರು ರೋಗದ ನಿರ್ವಹಣೆ ಪ್ರಾತ್ಯಕ್ಷಿಕೆ | 10 |
| 10 | ಮೇವಿನ ಬೆಳೆಯ ಬ್ಯಾಂಕ | ಮೇವಿನ ಬೆಳೆಗಳ ಮುಂಚೂಣಿ ಪ್ರಾತ್ಯಕ್ಷಿಕೆ | 05 |
| 11 | ನವಣೆ ಮತ್ತು ರಾಗಿ ಶ್ಯಾವಿಗೆ | ಕಿರುಧಾನ್ಯಗಳ ಶ್ಯಾವಿಗೆ ಪ್ರಾತ್ಯಕ್ಷಿಕೆ | 05 |
| 12 | ಪೌಷ್ಟಿಕ ಕೈತೋಟ | ಶಾಲೆಗಳಲ್ಲಿ ಪೌಷ್ಟಿಕ ಕೈತೋಟ | 05 |



2015–16 ಸಾಲಿಗೆ ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳ ಅನುಕೂಲಕ್ಕಾಗಿ ಹೊಸ ಬೊಲೆರೋ ವಾಹನವನ್ನು ATARI-ICAR ಬೆಂಗಳೂರು ಇವರ ಹಣಕಾಸಿನ ನೆರವಿನಿಂದ ಖರೀದಿಸಲಾಗಿದೆ


ಸಂಪಾದಕರು ಹಾಗೂ ಪ್ರಕಾಶಕರು : **ಡಾ. ಸರೋಜನಿ ಜೆ ಕರಕಣ್ಣವರ**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–581115

ಸಹ ಸಂಪಾದಕರು : **ಶ್ರೀಮತಿ ಗೀತಾ ಎಸ್. ತಾಮಗಳೆ**

ಲೇಖಕರು : **ಶ್ರೀ. ಡಿ.ಎಸ್.ಮಲ್ಲಿಕಾರ್ಜುನಪ್ಪ ಗೌಡ, ಡಾ.ಎಸ್.ಎ. ಅಷ್ಟಪುತ್ರೆ, ಡಾ. ಅರ್ಚನಾ ಬಿ ಮತ್ತು ಡಾ. ಚನ್ನಯ್ಯ . ಹಿರೇಮಠ**

ಅಕ್ಷರ ಜೋಡಣೆ ಮತ್ತು ವಿನ್ಯಾಸ : **ಶ್ರೀ ಉಳವಪ್ಪ ಶಿವೋಜಿ,** ಡಿಟಿ , ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ
**ಕು. ರೇಖಾ ಕೆ. ಎನ್.,** ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–58111



**ಇಂದ,**
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ –581135 ಜಿ: ಹಾವೇರಿ
ದೂರವಾಣಿ : 08373–253524
ಮಿಂಚಂಚೆ : kvk_haveri@rediffmail.com
ವೆಬ್‌ಸೈಟ್ : www.kvkhaveri.org


**ಗೆ,**

**ತೆರೆದ ಅಂಚೆ**